**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ರೋಣ.**

**ಸಿ.ಸಿ. ಸಂಖ್ಯೆ - 1251/2020**

ಪಿರ್ಯಾದಿಃ ಬಸವರಾಜ ತಂದೆ ಕಳಕಪ್ಪ ಮಾದಿ,
ವಯಾಃ 48 ವರ್ಷ, ಉಃ ವ್ಯಾಪಾರ/ಶಿಕ್ಷಕರು,
ಸಾಃ ಗಜೇಂದ್ರಗಡ, ತಾಃ ಗಜೇಂದ್ರಗಡ, ಜಿಃ ಗದಗ.

ವಿರುದ್ಧ

ಅರೋಪಿಃ ಶಿವಾನಂದ ತಂದೆ ಫಕ್ಕೀರಪ್ಪ ಕುರಿ,
ವಯಾಃ 38 ವರ್ಷ, ಉಃ ಕ್ಲರ್ಕ್,
ಸಾಃ ಕೆ.ಎಸ್.ಎಸ್. ಪ್ರೌಢ ಶಾಲೆ, ಗುಳಿಗಲ್ಲಿ ,
ಗಜೇಂದ್ರಗಡ , ತಾಃ ಗಜೇಂದ್ರಗಡ, ಜಿಃ ಗದಗ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ದಾಖಲು ಮಾಡಿಕೊಳ್ಳಲಾದ ಆರೋಪಿಯ ಹೇಳಿಕೆ**

ಪ್ರಶ್ನೆ 1. ಈ ನ್ಯಾಯಾಲಯದಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷಿಯನ್ನು ಕೇಳಿದ್ದಿರಾ?

ಉತ್ತರ

ಪ್ರಶ್ನೆ 2. ಪ್ರಾಸಾ-1 ಬಸವರಾಜ ಕಳಕಪ್ಪ ಮಾದಿ ಇವರು ತಮ್ಮ ಸಾಕ್ಷಿಯಲ್ಲಿ ನುಡಿಯುವುದೇನೆಂದರೆ, ತಾನು ಆರೋಪಿಯೊಂದಿಗೆ ಬಹಳ ವರ್ಷಗಳಿಂದ ಪರಿಚಯವಿದ್ದು ಮತ್ತು ವಿಶ್ವಾಸದಿಂದ ನಡೆದುಕೊಂಡು ಬಂದು ದಿನಾಂಕ 21/06/2018 ರಂದು ಆರೋಪಿಯಾದ ನೀವು ತನ್ನ ಮನೆತನದ ಅಡಚಣೆಯ ಸಲುವಾಗಿ ರೂ.3,00,000/- ಗಳನ್ನು ಕೈಗಡ ಸಾಲವಾಗಿ ಪಡೆದುಕೊಂಡಿದ್ದು, ಅದನ್ನು ತೀರಿಸುವ ಸಲುವಾಗಿ ದಿನಾಂಕ 27/08/2020 ರಂದು ತಾನು ಖಾತೆ ಹೊಂದಿದ ಎಸ್.ಬಿ.ಐ. ಬ್ಯಾಂಕ್, ಗಜೇಂದ್ರಗಡ ಶಾಖೆಗೆ ಸಂಬಂಧಪಟ್ಟ ಚೆಕ್ ಸಂಖ್ಯೆ 095582 ನ್ನು ರೂ.3,00,000/- ಗಳಿಗೆ ಕೊಟ್ಟಿದ್ದು, ಸದರಿ ಚೆಕನ್ನು ದಿನಾಂಕ 28/08/2020 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗಜೇಂದ್ರಗಡ ಶಾಖೆಯಲ್ಲಿ ಹಾಜರುಪಡಿಸಿದೆನು. ಆಗ ಸದರಿ ಬ್ಯಾಂಕಿನರು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ದಿನಾಂಕ 28/08/2020 ರಂದು ಚೆಕನ್ನು ಮರಳಿ ಕೊಟ್ಟಿದ್ದು, ನಂತರ ತಾನು ದಿನಾಂಕ 04/09/2020 ರಂದು ತಮ್ಮ ವಕೀಲರ ಮೂಲಕ ಆರೋಪಿಯಾದ ನಿಮಗೆ ನೋಟಿಸ್ ಕೊಟ್ಟಿದ್ದು, ಆರೋಪಿಯಾದ ನೀವು ಸದರಿ ನೋಟಿಸನ್ನು ದಿನಾಂಕ 05/09/2020 ಪಡೆದುಕೊಂಡಿದ್ದರೂ ಸಹಿತ ಇದುವರೆಗೂ ಸಾಲವನ್ನು ಮರು ಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ

ಪ್ರಶ್ನೆ 3. ಈ ಪ್ರಕರಣದಲ್ಲಿ ನೀವೇನಾದರು ಹೇಳುವುದಿದೆಯಾ?

ಉತ್ತರ

ಪ್ರಶ್ನೆ 4. ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

ಉತ್ತರ

(ತೆರೆದ ನ್ಯಾಯಾಲಯದಲ್ಲಿ ಈ ಮೇಲಿನ ಪ್ರಶ್ನೆಗಳನ್ನು ಓದಿ ಹೇಳಿದ ತಿಳಿಸಿ, ನಂತರ ಆರೋಪಿ ಕೊಟ್ಟ ಉತ್ತರಗಳನ್ನು ಕೊಟ್ಟಂತೆ ಈ ದಿನ ಅಂದರೆ ದಿಃ 14/09/2022 ರಂದು ಪಡೆದುಕೊಳ್ಳಲಾಯಿತು)

**(ವಿಜಯಕುಮಾರ ಎಸ್.ಹಿರೇಮಠ)**
ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ರೋಣ.